| Documents | Exhibits |
|---|---|
| Certified copy of the affidavit sworn by Gangamma dated 27.02.2015 | **Ex.R.100** |

(Respondent counsel prays time for further chief examination. Time granted.)

(Computerized to my dictation in the open court as deposed by the witness.)

**R. O. I. & A. C.,**

**(PRASHANTHI.G)**
**IX Addl. C.C. & S.J., Bengaluru.**

ದಿಃ**03-01-2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟಿಸವಾಲು ಃ ಅರ್ಜಿದಾರರ ಪರ ಶ್ರೀ. ಆರ್.ಸಿ.ಎಸ್ ವಕೀಲರಿಂದ ಃ

1. ಅರ್ಜಿದಾರರು ಈ ಅರ್ಜಿಯನ್ನು ಯಾವ ಕಾರಣಕ್ಕೆ ಹಾಕಿದ್ದಾರೆ ಎಂದು ನನಗೆ ಗೊತ್ತಿದೆ. ಅದೇ ರೀತಿ ಸದರಿ ಅರ್ಜಿಗೆ ನಾನು ತಕರಾರು ಹಾಕಿದ್ದು ಅದರಲ್ಲಿ ಏನೇನು ಬರೆದಿದೆ ಎಂದೂ ಸಹ ನನಗೆ ಗೊತ್ತಿದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿಯೂ ಸಹ ಏನೆಲ್ಲಾ ಬರೆದಿದೆ ಎಂದು ನನಗೆ ಗೊತ್ತಿದೆ. ನನ್ನ ಮುಖ್ಯ ವಿಚಾರಣೆಯನ್ನು ನಾನು ಎಲ್ಲಾ ಎದುರುದಾರರ ಪರವಾಗಿ ಹಾಕಿದ್ದೇನೆ.

2. ನಾನು ಡಿಪ್ಲೋಮಾ ಇನ್ ಆಟೋಮೊಬೈಲ್ ಪೂರ್ತಿ ಮಾಡಿಲ್ಲ. ನಾನು ಓದಿದ ಕಾಲೇಜಿನ ಹೆಸರು ನನಗೆ ಜ್ಞಾಪಕ ಇಲ್ಲ. 1984 ರಲ್ಲಿ ನಾನು ಡಿಪ್ಲೋಮಾ ಕಾಲೇಜಿಗೆ ಸೇರಿದ್ದೆ. 1986-87 ರಲ್ಲಿ ನಾನು ಓದು ನಿಲ್ಲಿಸಿದ್ದೆ. ಡಿಪ್ಲೋಮಾ ಬಿಟ್ಟ ಬಳಿಕ ನಾನು ಕಟ್ಟಡ ಕಟ್ಟುವ ಕೆಲಸ ನನ್ನ ತಂದೆಯ ಜೊತೆ ಮಾಡುತ್ತಿದ್ದೆ. 1986-87 ರಲ್ಲಿ ನಾನು ನನ್ನ ತಂದೆಯ ಜೊತೆ ಕಟ್ಟಡ ಕಟ್ಟುವ ಕೆಲಸಕ್ಕೆ ಹೊರಟಿದ್ದೆ. ನಾನು ಇಂಡಸ್ಟ್ರಿಯಲ್ ಟೌನ್ ರಾಜಾಜಿನಗರದಲ್ಲಿ ಕಟ್ಟಡಗಳನ್ನು ಕಟ್ಟಿಸಿದ್ದೆ. ನನ್ನ ತಂದೆಯ ಜೊತೆ ಸೇರಿಕೊಂಡೇ ನಾನು ಕಟ್ಟಡಗಳನ್ನು ಕಟ್ಟಿಸಿದ್ದೆ. ಕಟ್ಟಡಗಳನ್ನು ಕಟ್ಟಿಸಲು ನಾನು ಯಾವುದೇ ಸ್ಯಾಂಕ್ಷನ್ ಪ್ಲಾನು ತೆಗೆದುಕೊಂಡಿಲ್ಲ. ಇಂಡಸ್ಟ್ರಿಯಲ್ ಟೌನಿನಲ್ಲಿ ಸ್ಯಾಂಕ್ಷನ್ ಪ್ಲಾನ್ ಇಲ್ಲದೆ ಯಾವುದೇ ಕಟ್ಟಡಗಳನ್ನು ಕಟ್ಟಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ನಂ.9/1, 4 ನೇ ಮುಖ್ಯ ರಸ್ತೆ, 6 ನೇ ಅಡ್ಡ ರಸ್ತೆ, ರಾಜಾಜಿನಗರದಲ್ಲಿ, ನಂ.9/4, 9/11, 9/22 ಗಳಲ್ಲಿ ಕಟ್ಟಡಗಳನ್ನು ಕಟ್ಟಿಸಿದ್ದೆ. ಸದರಿ ಸ್ಥಳಗಳ ವಿಸ್ತೀರ್ಣ, ಸದರಿ ಸ್ಥಳಗಳಲ್ಲಿ ಕಟ್ಟಡಗಳನ್ನು ಕಟ್ಟಿಸಲು ಎಷ್ಟು ಸಿಮೆಂಟ್ ಖರ್ಚಾಗಿದೆ, ಎಷ್ಟು ಮರಳು ಖರ್ಚಾಗಿದೆ, ಎಷ್ಟು ಚದರ ಅಡಿಗಳ ವಿಸ್ತೀರ್ಣದಲ್ಲಿ ಕಟ್ಟಡಗಳನ್ನು ಕಟ್ಟಲಾಗಿದೆ ಎಂದು ನನಗೆ ನೆನಪಿಲ್ಲ. ಅದೇ ರೀತಿ ಸದರಿ ಕಟ್ಟಡಗಳನ್ನು ಕಟ್ಟಲು ಎಷ್ಟು ಖರ್ಚಾಗಿದೆ ಎಂದೂ ಸಹ ನನಗೆ ನೆನಪಿಲ್ಲ. ನಾನು ಆ ರೀತಿಯಾಗಿ ಯಾವುದೇ ಕಟ್ಟಡಗಳನ್ನು ಕಟ್ಟಿಸಿಲ್ಲ ಮತ್ತು ನ್ಯಾಯಾಲಯದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ನಾನು 1995 ರಲ್ಲಿ ಮದುವೆಯಾಗಿದ್ದೇನೆ. 1986-87 ರಿಂದ 1995 ರವರೆಗೆ ನಾನು ಯಾವುದೇ ಆದಾಯ ತೆರಿಗೆ ಪಾವತಿ ಮಾಡಿಲ್ಲ. ನನಗೆ ಯಾವುದೇ ರೀತಿಯ ಕೆಲಸ ಇದ್ದಿರಲಿಲ್ಲ, ನನಗೆ ಯಾವುದೇ ಆದಾಯ ಇಲ್ಲದ ಕಾರಣ ನಾನು ಯಾವುದೇ ಆದಾಯ ತೆರಿಗೆ ಪಾವತಿ ಮಾಡಿಲ್ಲ ಎಂದರೆ ಸರಿಯಲ್ಲ. ಈಗ ನಮ್ಮ ಕುಟುಂಬದಲ್ಲಿ ನನ್ನ ತಾಯಿ, ನನ್ನ ಹೆಂಡತಿ ಮತ್ತು ನನ್ನ ಮಕ್ಕಳು ಇದ್ದಾರೆ. ನನ್ನ ತಾಯಿಯನ್ನು ನಾನು ನೋಡಿಕೊಳ್ಳುತ್ತಿದ್ದೇನೆ. ನಮ್ಮ ಮನೆಯ ಖರ್ಚು ವೆಚ್ಚಗಳಿಗೆ ನನ್ನ ತಾಯಿ ಹಣ ಕೊಡುತ್ತಾರೆ.

4. ನನ್ನ ಮುಖ್ಯ ವಿಚಾರಣೆಯಲ್ಲಿ ವಿವರಿಸಿದ ನಂ.17, ಜಯಲಕ್ಷ್ಮಮ್ಮ ಲೇಔಟ್, 12 ನೇ ಕ್ರಾಸ್, ನಾಗರಭಾವಿ 2 ನೇ ಹಂತ ನನ್ನ ತಂಗಿಯ ಗಂಡ ಕಮಲೇಶ್ ಅವರಿಗೆ ಸೇರಿದ್ದು. ಅವರು ಈ ಅರ್ಜಿಯಲ್ಲಿ ಎದುರುದಾರ ನಂ.5(ಎ).

5. ಈ ಮೇಲೆ ಹೇಳಿದ ನಂ.17, ಜಯಲಕ್ಷ್ಮಮ್ಮ ಲೇಔಟ್, 12 ನೇ ಕ್ರಾಸ್, ನಾಗರಭಾವಿಯಲ್ಲಿದ್ದ ಮನೆ 3 ವರ್ಷಗಳ ಮೊದಲು ಕಟ್ಟಲಾಗಿತ್ತು. ಈ ಆಸ್ತಿಯ ಹಿಂದಿನ ಮಾಲೀಕರು ಜಯಲಕ್ಷ್ಮಮ್ಮ ಹಾಗೂ ರಾಮಕೃಷ್ಣಯ್ಯ. ನಾನು ಈ ಮನೆಗೆ ಬಾಡಿಗೆ ಕೊಡುತ್ತಿಲ್ಲ.

6. 5 ನೇ ಎದುರುದಾರರು 2020 ನೇ ಇಸವಿಯಲ್ಲಿ ತೀರಿಹೋದರು. ಅವರಿಗೆ ಹೃದಾಯಾಘಾತ ಆಗಿತ್ತು. ನನ್ನ ತಂಗಿಯ ಗಂಡ ನನ್ನ ತಂಗಿ ತೀರಿಹೋದ ನಂತರ ಪುನಃ ಮದುವೆ ಆಗಿದ್ದಾರೆ. 2 ನೇ ಮದುವೆ ಆದ ನಂತರವೂ ಸಹ ಅವರಿಗೆ ಒಂದು ಮಗು ಇದೆ

ಎಂದರೆ ಸರಿ. ಅವರ 2 ನೇ ಹೆಂಡತಿ ಕಮಲೇಶ್ ಜೊತೆ ಇದ್ದಾರೆ. ಕಮಲೇಶ್ ಅವರು ಅನ್ನಪೂರ್ಣೇಶ್ವರಿ ನಗರದಲ್ಲಿ ವಾಸವಾಗಿದ್ದಾರೆ. ಅವರ ವಿಳಾಸ ಸಹ್ಯಾದ್ರಿ ನಿಲಯ, ಚಂದ್ರಶೇಖರ ಲೇಔಟ್, ಅನ್ನಪೂರ್ಣೇಶ್ವರಿ ನಗರ.

7. ನನ್ನ ತಂದೆ ಜೀವಂತವಾಗಿರುವಾಗಲೇ ನನ್ನ ತಂಗಿ 5 ನೇ ಎದುರುದಾರರಿಗೆ ಒಂದಷ್ಟು ಜಾಗಗಳನ್ನು ದಾನವಾಗಿ ನೀಡಿದ್ದರು ಎಂದರೆ ಸಾಕ್ಷಿ ದಾನವಾಗಿ ನೀಡಿಲ್ಲ ಬದಲಾಗಿ ಅರಿಶಿಣ ಕುಂಕುಮಕ್ಕೆ ಎಂದು ನೀಡಿದ್ದರು ಎಂದು ನುಡಿಯುತ್ತಾರೆ. ಅದೇ ರೀತಿ ತ್ರಿವೇಣಿ ಹಾಗೂ ವಿಜಯಾ ಅವರಿಗೂ ಸಹ ಅದೇ ರೀತಿ ಜಾಗಗಳನ್ನು ನೀಡಿದ್ದಾರೆ ಎಂದರೆ ಸರಿ. ನನ್ನ ತಂದೆ 5 ನೇ ಎದುರುದಾರರಿಗೆ ಹಾಗೂ ತ್ರಿವೇಣಿ ಹಾಗೂ ವಿಜಯಾ ಅವರಿಗೆ ನೀಡಿದ ಜಾಗಗಳು ಅವರ ಸ್ವಯಾರ್ಜಿತ ಜಾಗ. ನನ್ನ ತಂದೆ ಅಕ್ಕಿ ಗಿರಣಿ ಇಟ್ಟಿದ್ದು ಅದರಿಂದ ಬಂದ ಆದಾಯದಲ್ಲಿ ಮೇಲೆ ಹೇಳಿದ ಜಾಗಗಳನ್ನು ಖರೀದಿಸಿದ್ದರು. ಸದರಿ ಅಕ್ಕಿ ಗಿರಣಿ ಜೇಡರಹಳ್ಳಿಯಲ್ಲಿದ್ದು ರಾಜಾಜಿನಗರ 5 ನೇ ಬ್ಲಾಕಿನಲ್ಲಿತ್ತು. ಅದು ಯಾವಾಗ ಸ್ಥಾಪನೆಯಾಗಿತ್ತು ಮತ್ತು ಅದರಿಂದ ತಿಂಗಳಿಗೆ ಎಷ್ಟು ಆದಾಯ ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ಮಾಲಾ, ವಿಜಯಾ ಹಾಗೂ ತ್ರಿವೇಣಿಯವರಿಗೆ ಸರ್ವೇ ನಂ.3 ರಲ್ಲಿ ನನ್ನ ತಂದೆ ಆಸ್ತಿಗಳನ್ನು ಕೊಟ್ಟಿದ್ದರು.

8. ನನ್ನ ಹೆಂಡತಿ ಬೆಂಗಳೂರಿನ ಶಿವಣಹಳ್ಳಿಯವರು. ನನ್ನ ಮಾವ ಅಬಕಾರಿ ಇನ್ಸ್ ಪೆಕ್ಟರ್. ನನ್ನ ಮಾವ ಅನುಕೂಲಸ್ಥರು ಎಂದರೆ ಸರಿ. ನನ್ನ ಮದುವೆಯ ಸಂದರ್ಭದಲ್ಲಾಗಲೀ ಅಥವಾ ಮದುವೆಯ ನಂತರವಾಗಲೀ ನಾನು ನನ್ನ ಹೆಂಡತಿಯ ಮನೆಯವರ ಕಡೆಯಿಂದ ಯಾವುದೇ ಸ್ವತ್ತುಗಳನ್ನಾಗಲೀ ಆಸ್ತಿಗಳನ್ನಾಗಲೀ ಪಡೆದುಕೊಂಡಿಲ್ಲ. ನನಗೆ ಇಬ್ಬರು ಮಕ್ಕಳು. ಅವರ ಹೆಸರು ಮೊನೇಶ್ ಹಾಗೂ ಲಕ್ಷ್ಮೀಶ್. ನನ್ನ ಮಗ ಮೊನೇಶ್ ಗೆ 27 ವರ್ಷ ಹಾಗೂ ಲಕ್ಷ್ಮೀಶ್ ಗೆ 25 ವರ್ಷ. ಮೊನೇಶ್ ಹೆಚ್.ಆರ್ ಮಾರ್ಕೆಟಿಂಗ್ ನಲ್ಲಿ ಎಂಬಿಎ ಮಾಡಿದ್ದು ಸಾಫ್ಟ್ ವೇರ್ ಕನ್ಸಲ್ಟೆಂಟ್ ನಲ್ಲಿ ಕೆಲಸ ಮಾಡುತ್ತಿದ್ದಾರೆ. ಲಕ್ಷ್ಮೀಶ್ ಬಿ.ಇ ಮಾಡಿದ್ದು ಈಗ ಎಂ.ಟೆಕ್ ಮಾಡುತ್ತಿದ್ದಾರೆ.

9. ನನ್ನ ತಂದೆ ನನಗೆ ಭೈರವೇಶ್ವರ ಆಟೋಮ್ಯಾಕ್ಸ್ ಎಂಬ ಒಂದು ಸಣ್ಣ ಕೈಗಾರಿಕಾ ಘಟಕವನ್ನು 1992 ರಲ್ಲಿ ಮಾಡಿಕೊಟ್ಟಿದ್ದರು ಎಂದರೆ ಸಾಕ್ಷಿ 1989 ರಲ್ಲೇ ಮಾಡಿಕೊಟ್ಟಿದ್ದರು ಎಂದು ನುಡಿಯುತ್ತಾರೆ. ಆಸ್ತಿ ನಂ.9/1 ರಲ್ಲಿ ಅದನ್ನು ಮಾಡಿಕೊಟ್ಟಿದ್ದರು ಎಂದರೆ ಸರಿ. ಆಸ್ತಿ ನಂ.9/1 ರಲ್ಲಿ ಒಂದು ಶೀಟ್ ಕಟ್ಟಡ ಕಟ್ಟಿಸಿ ಕೈಗಾರಿಕಾ ಘಟಕ ಮಾಡಿಕೊಟ್ಟಿದ್ದರು ಎಂದರೆ ಸರಿ. ಸದರಿ ಕೈಗಾರಿಕಾ ಘಟಕವನ್ನು ಮಾಡಲು ನನ್ನ ತಂದೆ ಕೆ.ಎಸ್.ಎಫ್.ಸಿ.ಯಿಂದ ಸಾಲ ತೆಗೆದುಕೊಂಡಿದ್ದರು ಎಂದರೆ ಸರಿ. ಸದರಿ ಕೈಗಾರಿಕಾ ಘಟಕವನ್ನು ನಟ್ ಹಾಗೂ ಬೋಲ್ಟುಗಳನ್ನು ತಯಾರಿಸಲು ಮಾಡಿಕೊಟ್ಟಿದ್ದರು ಎಂದರೆ ಸರಿ. ಸದರಿ ಕೈಗಾರಿಕಾ ಘಟಕವನ್ನು ತಯಾರಿ ಮಾಡಿಕೊಟ್ಟ

ನಂತರ ನಾನು ಅದನ್ನು ನಡೆಸಲು ಸ್ವಲ್ಪ ಸಾಲ ತೆಗೆದಿದ್ದೆ ಎಂದರೆ ಸರಿಯಲ್ಲ. ಸಾಲವನ್ನು ತೆಗೆಯುವುದಕ್ಕೋಸ್ಕರ ನಾನು ಕೆಲವು ಖಾಲಿ ಚೆಕ್ಕುಗಳಿಗೆ ಸಹಿ ಹಾಕಿ ಕೊಟ್ಟಿದ್ದೆ ಎಂದರೆ ಸರಿಯಲ್ಲ. ಅದೇ ರೀತಿ ಆ ಸಂದರ್ಭದಲ್ಲಿ ನಾನು ಖಾಲಿ ಸ್ಟ್ಯಾಂಪ್ ಪೇಪರುಗಳಿಗೆ ಸಹಿ ಹಾಕಿ ನಾನು ಯಾರಿಂದ ಸಾಲ ತೆಗೆದುಕೊಂಡಿದ್ದೆನೋ ಅವರಿಗೆ ನೀಡಿದ್ದೆ ಎಂದರೆ ಸರಿಯಲ್ಲ. ಸದರಿ ಕೈಗಾರಿಕಾ ಘಟಕ ನಾನು ಸರಿಯಾಗಿ ನಡೆಸದೇ ಆ ಬಳಿಕ ಅದನ್ನು ಮುಚ್ಚಬೇಕಾಗಿ ಬಂತು ಎಂದರೆ ಸರಿಯಲ್ಲ. ನಾನು ಸದರಿ ಕೈಗಾರಿಕಾ ಘಟಕವನ್ನು ಮುಚ್ಚಿಲ್ಲ ಬದಲಾಗಿ ನಾನು ಅದನ್ನು ನನ್ನ ತಮ್ಮ(ಅರ್ಜಿದಾರ)ನಿಗೆ ನೀಡಿದ್ದು ಅವರು ಅದನ್ನು ಮುಚ್ಚಿದ್ದಾರೆ ಎಂದು ನುಡಿಯುತ್ತಾರೆ. ನಾನು ಸದರಿ ಕೈಗಾರಿಕಾ ಘಟಕವನ್ನು ಸರಿಯಾಗಿ ನಡೆಸದೆ ನಷ್ಟ ಉಂಟಾಗಿ ನನ್ನ ತಂದೆಯೇ ಕೆ.ಎಸ್.ಎಫ್.ಸಿ ಸಾಲವನ್ನು ತೀರಿಸಿದ್ದರು ಎಂದರೆ ಸಾಕ್ಷಿ ನಾನು ತೀರಿಸಿದ್ದೇನೆ ಎಂದು ನುಡಿಯುತ್ತಾರೆ. ಆ ರೀತಿಯಾಗಿ ಸಾಲ ತೀರಿಸಲು ನನ್ನ ಬಳಿ ಹಣ ಇಲ್ಲದ ಕಾರಣ ನನ್ನ ತಂದೆ ಅದನ್ನು ತೀರಿಸಿದ್ದಾರೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ನಾನೇ ಸಾಲವನ್ನು ತೀರಿಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ನಾನು ಮಾಡಿದ ಕೈ ಸಾಲಗಳನ್ನು ತೀರಿಸಿ ನಾನು ನೀಡಿದ ಖಾಲಿ ಚೆಕ್ಕುಗಳನ್ನು ವಾಪಾಸು ತೆಗೆದುಕೊಂಡಿದ್ದರು ಎಂದರೆ ಸರಿಯಲ್ಲ.

10. ಸದರಿ ಕೈಗಾರಿಕಾ ಘಟಕವನ್ನು 2000 ದ ಇಸವಿಯಲ್ಲಿ ಮುಚ್ಚಲಾಗಿತ್ತು ಎಂದರೆ ಸಾಕ್ಷಿ ಅದನ್ನು 2015 ರಲ್ಲಿ ಮುಚ್ಚಲಾಗಿತ್ತು ಎಂದು ನುಡಿಯುತ್ತಾರೆ. 2000 ದ ಇಸವಿಯಲ್ಲೇ ಸದರಿ ಕೈಗಾರಿಕ ಘಟಕವನ್ನು ಮುಚ್ಚಲಾಗಿತ್ತು ಮತ್ತು ನನ್ನ ತಂದೆ ಕೆ.ಎಸ್.ಎಫ್.ಸಿ.ಯಿಂದ ಪಡೆದ ಸಾಲವನ್ನು ಅವರೇ ತೀರಿಸಿದ್ದು ಉಳಿದಂತೆ ನಾನು ಮಾಡಿದ ಕೈ ಸಾಲಗಳನ್ನು ನನ್ನ ತಮ್ಮ ತೀರುವಳಿ ಮಾಡಿ ನನ್ನ ಸಹಿ ಇರುವ ಖಾಲಿ ಚೆಕ್ಕುಗಳು ಹಾಗೂ ಖಾಲಿ ಸ್ಟಾಂಪ್ ಪೇಪರುಗಳನ್ನು ವಾಪಾಸು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ಕೆ.ಎಸ್.ಎಫ್.ಸಿ ಸಾಲವನ್ನು ನಾನೇ ತೀರುವಳಿ ಮಾಡಿದ್ದೇನೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನನ್ನ ತಂದೆಯೇ ಸದರಿ ಸಾಲವನ್ನು ತೀರಿಸಿದ ಕಾರಣ ನನ್ನ ಬಳಿ ಆ ರೀತಿಯಾದ ಸಾಲ ತೀರುವಳಿ ಮಾಡಿದ ದಾಖಲೆಗಳು ಇಲ್ಲ ಎಂದರೆ ಸರಿಯಲ್ಲ. 2014-15 ರಲ್ಲಿ ಸಣ್ಣ ಕೈಗಾರಿಕ ಘಟಕವನ್ನು ಮುಚ್ಚಲಾಗಿದೆ ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲಾತಿ ಇಲ್ಲ. ಭೈರವೇಶ್ವರ ಆಟೋ ಮ್ಯಾಟ್ಸ್ ನನ್ನ ಹೆಸರಿನಲ್ಲಿ ನೋಂದಣಿಯಾಗಿತ್ತು ಎಂದರೆ ಸರಿ.

11. ನಾನು ಓದನ್ನು ಪೂರ್ತಿ ಮಾಡಿರಲಿಲ್ಲ, ಕೈಗಾರಿಕ ಘಟಕವನ್ನು ಮುಚ್ಚಲಾಗಿತ್ತು ಮುಂದುವರಿದು ನನಗೆ ಮದುವೆಯಾಗಿ ಇಬ್ಬರು ಮಕ್ಕಳಿದ್ದು ನಾನು ಯಾವುದೇ ಕೆಲಸ ಮಾಡುತ್ತಿಲ್ಲದ ಕಾರಣ ನನ್ನ ತಂದೆಗೆ ನನ್ನ ಬಗ್ಗೆ ಚಿಂತೆಯಾಗಿತ್ತು ಎಂದರೆ ಸರಿಯಲ್ಲ.

12. ನನ್ನ ತಂದೆ ಜೀವಂತವಾಗಿರುವ ಸಂದರ್ಭದಲ್ಲೇ ಅವರ ಎಲ್ಲಾ ಮಕ್ಕಳಿಗೂ ಮದುವೆಯಾಗಿತ್ತು ಎಂದರೆ ಸರಿಯಲ್ಲ. ನನ್ನ ತಂದೆ ತೀರಿಹೋದ ನಂತರ ಅರ್ಜಿದಾರರೇ ನೋಡಿಕೊಳ್ಳುತ್ತಿದ್ದರು ಎಂದರೆ ಸಾಕ್ಷಿ ಮೊದಲು ನನ್ನ ತಾಯಿ ನೋಡಿಕೊಳ್ಳುತ್ತಿದ್ದರು ಆ ಬಳಿಕ ನನ್ನ ತಮ್ಮ ದೇವರು ಬರುತ್ತದೆ ಎಂದು ನಾಟಕ ಮಾಡಿ ನನ್ನ ತಾಯಿಗೆ ಹೆದರಿಸಿ ಎಲ್ಲಾ ಜಾಗಗಳನ್ನು ನೋಡಿಕೊಳ್ಳುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ತಮ್ಮ ಆ ರೀತಿಯಾಗಿ ಯಾವುದೇ ರೀತಿಯಲ್ಲಿ ನನ್ನ ತಾಯಿಯನ್ನು ಹೆದರಿಸಿರಲಿಲ್ಲ ಮತ್ತು ತಂದೆ ತೀರಿಹೋದ ನಂತರ ಅವರೇ ಎಲ್ಲಾ ಜಾಗಗಳನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ.

(ಮುಂದುವರಿದ ಪಾಟಿ ಸವಾಲಿಗೆ ಅವಕಾಶ ಕೇಳಿದ್ದರಿಂದ, ಅವಕಾಶ ನೀಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ,

(ಪ್ರಶಾಂತಿ.ಜಿ)
9ನೇ ಅಪರ ನಗರ ಸಿವಿಲ್ ಮತ್ತು ಸತ್ರ
ನ್ಯಾಯಾಧೀಶರು, ಬೆಂಗಳೂರು.